ಗುಳ್ಳೇದಗುಡ್ಡ ನಗರದ ಮೂಕೇಶ್ವರಿ ಕೊಳದ ಹತ್ತಿರದಲ್ಲಿರುವ ನರ್ಸರಿ.

2909:( 3900)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರದ ಮೂಕೇಶ್ವರಿ ಕೊಳ್ಳದ ಹತ್ತಿರ ಕೈಗೊಳ್ಳಲಾಗುತ್ತಿರುವ ನರ್ಸರಿಯ ಅಂದಾಜು ವೆಚ್ಚ ಎಷ್ಟು?

ಆ) ಸರ್ಕಾರ ಇದುವರೆಗೂ ಈ ಯೋಜನೆಗೆ ಬಿಡುಗಡೆ ಮಾಡಿದ ಹಣ ಎಷ್ಟು;

ಇ) ಸದರಿ ಯೋಜನೆಯ ಇದುವರೆಗಿನ ಪ್ರಗತಿ ಎಷ್ಟು; ಯಾವಾಗ ಪೂರ್ಣಗೊಳಿಸುಸಲಾಗುವುದು.

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) 1.00 ಲಕ್ಷ ರೂ.ಗಳು

ಆ) 1.00 ಲಕ್ಷ ರೂ.ಗಳು

ಇ) ಮೂಕೇಶ್ವರಿ ಕೊಳ್ಳದ ಹತ್ತಿರ ಅಭಿವೃದ್ಧಿ ಪಡಿಸುತ್ತಿರುವ ನರ್ಸರಿಯಲ್ಲಿ ಬೋರ್‌ವೆಲ್ ಕೊರೆದಿರುತ್ತದೆ. ಈಗ ಪಂಪಸೆಟ್ಟು ಅಳವಡಿಸಿ ವಿದ್ಯುತ್ ಸರಬರಾಜು ಮಾಡಿಕೊಳ್ಳುವ ಕಾರ್ಯ ಪ್ರಗತಿಯಲ್ಲಿರುತ್ತದೆ. 31-3-1999 ರೊಳಗಾಗಿ ಪೂರ್ಣಗೊಳಿಸಲಾಗುವುದು.

ಕಾರ್ಮಿಕರಿಗೆ ಕನಿಷ್ಟ ವೇತನ

2910 (3964)

ಶ್ರೀ. ಎ.ರಾಮದಾಸ್. (ಕೃಷ್ಣರಾಜ) ಮಾನ್ಯ ಕಾರ್ಮಿಕ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಇಲಾಖೆಗಳಲ್ಲಿರುವ ಕಾರ್ಮಿಕರು ಕನಿಷ್ಠ ವೇತನ ಅಡಿ ಬರುತ್ತಾರೆಯೇ?

ಆ) ಸರ್ಕಾರದ ಇಲಾಖೆಗಳಲ್ಲಿ ಕನಿಷ್ಠ ವೇತನ ಪಡೆಯದೇ ಕೆಲಸ

ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಧಾರ್ಮಿಕ ದತ್ತಿ ಇಲಾಖೆಯಲ್ಲಿರುವ ಕಾರ್ಮಿಕರು ಪಡೆಯುತ್ತಿರುವ ಕನಿಷ್ಠ ಮಾಸಿಕ ವೇತನ ಎಷ್ಟು? ಈ ಬಗ್ಗೆ ಯಾವ ಯಾವ ಹುದ್ದೆಯಲ್ಲಿರುವವರು ಎಷ್ಟೆಷ್ಟು ವೇತನ ಪಡೆಯುತ್ತಿದ್ದಾರೆ?

ಈ) ಕಾರ್ಮಿಕರು ಕನಿಷ್ಠ ವೇತನದಿಂದ ವಂಚಿತರಾಗದಂತೆ ನೋಡಿಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು):

ಅ) ಅನುಸೂಚಿತ ಉದ್ಯೋಗಗಳಿಗೆ ಮಾತ್ರ ಕನಿಷ್ಠ ವೇತನ ಅನ್ವಯವಾಗುತ್ತದೆ.

ಆ) ಹೌದು.

ಇ) ಧಾರ್ಮಿಕ ದತ್ತಿ ಇಲಾಖೆಯಲ್ಲಿನ ಉದ್ಯೋಗಗಳನ್ನು ಅನುಸೂಚಿತ ಪಟ್ಟಿಯಲ್ಲಿ ಸೇರಿಸಿರುವುದಿಲ್ಲ.

ಈ) ಕನಿಷ್ಠ ವೇತನ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಈ ಕೆಳಗಿನ ಕ್ರಮಗಳನ್ನು ಜರುಗಿಸಲಾಗುತ್ತಿದೆ.

1. ಕಾರ್ಮಿಕ ಆಯುಕ್ತರನ್ನು ಸೇರಿದಂತೆ ಕಾರ್ಮಿಕ ನಿರೀಕ್ಷಕರನ್ನು ಕಾಯ್ದೆಯಡಿಯಲ್ಲಿ ನಿರೀಕ್ಷಕರನ್ನಾಗಿ ಪ್ರಕಟಿಸಲಾಗಿದೆ.

2. ಹಕ್ಕು ಕೋರಿಕೆ ಅರ್ಜಿಗಳನ್ನು ತೀರ್ಮಾನಿಸಲು ಕಾರ್ಮಿಕ ಅಧಿಕಾರಿಗಳನ್ನು ಕಾಯ್ದೆಯ ಅಡಿಯಲ್ಲಿ ಪ್ರಕಟಿಸಲಾಗಿದೆ.

3. ಕಂದಾಯ ಇಲಾಖೆಯ ಕಂದಾಯ ನಿರೀಕ್ಷಕರನ್ನು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಕಾಯ್ದೆಯಲ್ಲಿನ ಅವಕಾಶಗಳನ್ನು ಕಾರ್ಯಗತಗೊಳಿಸಲು ಪ್ರಕಟಿಸಲಾಗಿದೆ.

4. ಜಾರಿ ಅಧಿಕಾರಿಗಳಿಗೆ ತಪಾಸಣಾ ಗುರಿಗಳನ್ನು ನಿಗಧಿಪಡಿಸಲಾಗಿದೆ.

5. ಜಾರಿ ಅಧಿಕಾರಿಗಳಿಗೆ ತಪಾಸಣೆಗಳನ್ನು ನಿಯತಕಾಲಿಕವಾಗಿ ಪುನರ್‌ವಿಮರ್ಶೆ ಮಾಡಲಾಗುತ್ತಿದೆ.

6. 1-1-98 ರಿಂದ 31-6-98ರ ಅವಧಿಗೆ ಒಟ್ಟು 42 ಹಕ್ಕು ಕೋರಿಕೆ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ.

7. ಕಾಯ್ದೆಯಲ್ಲಿನ ಉಲ್ಲಂಘನೆಗಳಿಗೆ ಸಂಬಂಧಪಟ್ಟಂತೆ ಮೇಲಿನ ಅವಧಿಗೆ ಒಟ್ಟು 208 ಪ್ರಕರಣಗಳನ್ನು ದಾಖಲೆ ಮಾಡಲಾಗಿದೆ.

ಭಟ್ಕಳ ಕಂದಾಯ ವಿಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನು.

2911:(3929)

ಶ್ರೀ ಶಿವಾನಂದ ನಾಯ್ಕ (ಭಟ್ಕಳ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಕಂದಾಯ ವಿಭಾಗದಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಕಂದಾಯ ಇಲಾಖೆಯವರು ಅರಣ್ಯ ಇಲಾಖೆಯ ಗಮನಕ್ಕೆ ತರದೇ ಪಟ್ಟಾ ನೀಡುತ್ತಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಒಟ್ಟು ಎಷ್ಟು ವಿಸ್ತೀರ್ಣ ಅರಣ್ಯ ಜಮೀನನ್ನು ಕಂದಾಯ ಇಲಾಖೆಯವರು (ಹಂಗಾಮಿ ಲಾಗಣಿ) (ತೊರೆದು ಬಂದ ಜಾಗ) ಇತ್ಯಾದಿಯಾಗಿ ಮಂಜೂರು ಮಾಡಿರುತ್ತಾರೆ.

ಇ) ಈ ಬಗ್ಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಈ) ಈ ಕಂದಾಯ ಇಲಾಖೆಯ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ.ಮಂಜುನಾಥ (ಅರಣ್ಯ ಸಚಿವರು):

ಅ) ಸರ್ಕಾರಿ ಆದೇಶ ಸಂಖ್ಯೆ:ಆರ್ 106 ಎಲ್‌ಜಿಪಿ 88, ಬೆಂಗಳೂರು, ದಿನಾಂಕ 6-3-88ರಲ್ಲಿ ಕಂದಾಯ ಇಲಾಖೆಗೆ ನೀಡಲಾದ ಅಧಿಕಾರದ ಮೇರೆಗೆ ಕಂದಾಯ ಇಲಾಖೆಯವರು ಕ್ರಮ ಕೈಗೊಳ್ಳುತ್ತಿದ್ದಾರೆ. ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸನ್ 1964 ರಿಂದ 1989ರವರೆಗೆ 65689 ಎಕರೆ ಅರಣ್ಯ ಜಮೀನನ್ನು ಕಂದಾಯ ಇಲಾಖೆಗೆ ಬಿಟ್ಟು ಕೊಟ್ಟಿದ್ದು, ಅವುಗಳಲ್ಲಿ 19529 ಎಕರೆ ಅರಣ್ಯ ಜಮೀನನ್ನು 1970ನೇ ಇಸ್ವಿಯಲ್ಲಿ 6158 ಜನರಿಗೆ ಕಂದಾಯ ಇಲಾಖೆಯವರು ಮಂಜೂರು ಮಾಡಿರುವುದು ಇರುತ್ತದೆ. ಸದರಿ ಹಂಗಾಮಿ ಲಾಗಣಿಗೆ ನೀಡಿದ ಜಮೀನನ್ನು ಖಾಯ, ಲಾಗಣಿಗೆ ಪರಿವರ್ತಿಸಿ, ಮಂಜೂರಿ ನೀಡಲು ಕಂದಾಯ ಇಲಾಖೆಗೆ ಸರಕಾರಿ ಆದೇಶ ನಂ:ಆರ್‌ಡಿ 106 ಎಲ್‌ಜಿಪಿ 88, ಬೆಂಗಳೂರು